**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಬೀದರ್ ಜಿಲ್ಲೆ, ಔರಾದ್ ತಾಲ್ಲೂಕು ಸಂಗಮ ಗ್ರಾಮಕ್ಕೆ ಜಲನಿರ್ಮಲ ಯೋಜನೆಯಡಿ ಕೈಗೊಳ್ಳಲಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸದೆ ಕರ್ತವ್ಯಲೋಪವೆಸಗಿ ಹಣ ದುರುಪಯೋಗಕ್ಕೆ ಕಾರಣರಾಗಿರುವ ಅಧಿಕಾರಿ / ನೌಕರರ ವಿರುದ್ಧ ಇಲಾಖಾ ವಿಚಾರಣೆ -ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರು-1 ಇವರಿಗೆ ವಹಿಸುವ ಬಗ್ಗೆ- ಆದೇಶ.

**ಓದಲಾಗಿದೆ:**
1. ಮಾನ್ಯ ಉಪ ಲೋಕಾಯುಕ್ತರು-1, ಇವರ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿ ಸಲ್ಲಿಸಿರುವ ವರದಿ ದಿ:24-04-2015.
2. ಉಪ ನಿಬಂಧಕರು,(ಪ್ರ) ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೆಂಟ್ / ಉಪಲೋಕ್ / ಜಿಎಲ್‌ಬಿ / 8216 / 2011/ ಡಿಆರ್‌ಇ 3 ದಿನಾಂಕ:04-05-2015.

******

**ಪ್ರಸ್ತಾವನೆ:**

ಪ್ರಭಾರಿ ಉಪ ನಿಬಂಧಕರು, ವಿಚಾರಣೆಗಳು-3 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದ ಜೊತೆಗೆ ಮಾನ್ಯ ಪ್ರಭಾರಿ ಉಪ ಲೋಕಾಯುಕ್ತ-1 ರವರು ಲೋಕಾಯುಕ್ತ ಕಾಯ್ದೆ ಕಲಂ 12(3) ರ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತ-1 ಇವರ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಸರ್ಕಾರದ ನಿರ್ಣಯವನ್ನು ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-1 ರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಬೀದರ್ ಜಿಲ್ಲೆ, ಔರಾದ್(ಬಿ) ತಾಲ್ಲೂಕು, ಸಂಗಮ ಗ್ರಾಮದಲ್ಲಿ ಜಲನಿರ್ಮಲ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಯು ಅವೈಜ್ಞಾನಿಕ ಮತ್ತು ನಕಲಿ ಕಾಮಗಾರಿಯಾಗಿರುತ್ತದೆ ಎಂದು ಶ್ರೀ ಕೆ.ಸಂತೋಷ ಬಿನ್ ಸೂರ್ಯಕಾಂತ ಬಿರಾದಾರ್, ಸಂಗಮ ಗ್ರಾಮ ಔರಾದ್(ಬಿ) ತಾಲ್ಲೂಕು ಬೀದರ್ ಜಿಲ್ಲೆ ಇವರು ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ, ಲೋಕಾಯುಕ್ತ ಕಛೇರಿಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗವು ತನಿಖೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ ರೂ.28,30,496/- ಗಳ ವೆಚ್ಚದಲ್ಲಿ ಕೈಗೊಂಡಿರುವ ಸದರಿ ಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುವುದು ಹಾಗೂ ಸದರಿ ವೆಚ್ಚವು ವ್ಯರ್ಥವಾಗಿರುವುದು ಕಂಡುಬಂದಿರುವುದ್ದರಿಂದ ದೂರುದಾರರು ಮಾಡಿರುವ ಆಪಾದನೆಯು ಸಾಬೀತಾಗಿರುತ್ತದೆ ಎಂದು, ಈ ಯೋಜನೆಯಿಂದ ಸರ್ಕಾರಕ್ಕೆ ರೂ.28,30,496/- ಗಳ ನಷ್ಟವಾಗಿರುತ್ತದೆ ಎಂದು , ಈ ನಷ್ಟಕ್ಕೆ ಹಾಗೂ ಅವೈಜ್ಞಾನಿಕ ಮತ್ತು ವ್ಯರ್ಥ ಕಾಮಗಾರಿಯನ್ನು ಅನುಷ್ಠಾನಗೊಳಿಸಿರುವುದಕ್ಕೆ ಈ ಕೆಳಕಂಡ ಅಧಿಕಾರಿ/ನೌಕರರು ಜವಾಬ್ದಾರರಾಗಿರುತ್ತಾರೆಂದು ತಿಳಿಸಿರುತ್ತಾರೆ:-

1. ಶ್ರೀ ಸೂರ್ಯಕಾಂತ ಶಂಕರಗೊಂಡ, ಹಿಂದಿನ ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ,ಜಿಲ್ಲಾ ನೆರವು ಘಟಕ ಬೀದರ್.
2. ಶ್ರೀ ಎನ್.ಎ.ಪಾಟೀಲ, ಹಿಂದಿನ ಉಪ ಯೋಜನಾ ವ್ಯವಸ್ಥಾಪಕರು, ಜಲನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ ಬೀದರ್ (ಪ್ರಸ್ತುತ ನಿವೃತ್ತಿ).
3. ಶ್ರೀ ಮಲ್ಲಿಕಾರ್ಜುನ ಮರೂರ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜನಿಯರ್, ಪಂ.ರಾಜ್.ಇಂ.ಉಪ ವಿಭಾಗ, ಔರಾದ್(ಬಿ) (ಪ್ರಸ್ತುತ ನಿವೃತ್ತಿ).
4. ಶ್ರೀ ಅಶೋಕ್ ಕಾಳಗಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜನಿಯರ್, ಪಂ.ರಾಜ್.ಇಂ.ಉಪ ವಿಭಾಗ, ಔರಾದ್(ಬಿ).

5. ಶ್ರೀ ಸೈಯದ್ ಶಕೀರರಾಝಾ, ಹಿಂದಿನ ಕಿರಿಯ ಇಂಜಿನಿಯರ್ ಮತ್ತು ಪ್ರಭಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್.ಇಂ.ಉಪ ವಿಭಾಗ, ಔರಾದ್(ಬಿ).
6. ಶ್ರೀ ಮಲ್ಲಿಕಾರ್ಜುನ ಕಾರಂಗಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್.ಇಂ.ಉಪ ವಿಭಾಗ, ಔರಾದ್(ಬಿ).
7. ಶ್ರೀ ರವೀಂದ್ರ ಯರ್‌ನಲ್ಲೆ, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾಜ್.ಇಂ.ಉಪ ವಿಭಾಗ, ಔರಾದ್(ಬಿ).
8. ಶ್ರೀ ಶಾಲಿವಾನ್, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾಜ್. ಇಂ.ಉಪ ವಿಭಾಗ, ಔರಾದ್(ಬಿ) (ಪ್ರಸ್ತುತ ಮೃತರಾಗಿರುತ್ತಾರೆ).

ಮಾನ್ಯ ಉಪ ಲೋಕಾಯುಕ್ತ-1 ರವರು ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಗಳು / ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ:-

1) ಸಂಗಮ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಜಲನಿರ್ಮಲ ಯೋಜನೆಯಡಿ ಸುಮಾರು ರೂ.28.30 ಲಕ್ಷ ವೆಚ್ಚ ಮಾಡಲಾಗಿದೆ.
2) ಆದರೆ ನದಿಯ ಮಧ್ಯ ಭಾಗದಲ್ಲಿ ತೆರೆದ ಭಾವಿಯಲ್ಲಿ ಕಲ್ಮಷವಾಗಿರುವ ನೀರು ತುಂಬಿರುತ್ತದೆ. ಸದರಿ ತೆರೆದ ಬಾವಿಗೆ 2.00 ಮೀಟರ್ ಆರ್.ಸಿ.ಸಿ. ಸ್ಟೇನಿಂಗನ್ನು ನಿರ್ಮಿಸಿದ್ದು, ಅದರ ಎತ್ತರವು ನದಿಯ ಹೆಚ್.ಎಫ್.ಇಲ್. ಗಿಂತ ಬಹಳ ಕಡಿಮೆ ಇದ್ದು ನದಿಯಲ್ಲಿ ನೀರು ಬಂದಾಗ, ಮುಳುಗಡೆಯಾಗುವುದು, ಮುಂದುವರೆದು, ಬಾವಿಗೆ ಅಳವಡಿಸಿದ ರೈಸಿಂಗ್‌ಮೈನ್ ಪ್ರಾರಂಭದಲ್ಲಿ ಇಲ್ಲದಿರುವುದು ಹಾಗೂ ನದಿಯ ಅಗಲದ ಆಚೆಗೆ ರೈಸಿಂಗ್‌ಮೈನ್ ಹಾಗೂ ಪಂಪ್‌ಹೌಸ್ ಇರುತ್ತವೆ. ಇನ್ನುಳಿದಂತೆ ಆರ್.ಸಿ.ಸಿ. ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿದರೂ ಸಹ ಅದರಲ್ಲಿ ನೀರು ಸಂಗ್ರಹ ಮಾಡಲಾಗಿರುವುದಿಲ್ಲ.
3) ಹೀಗಾಗಿ ಸದರಿ ನೀರು ಸರಬರಾಜು ಯೋಜನೆಯಿಂದ ಸಂಗಮ ಗ್ರಾಮಕ್ಕೆ ನೀರು ಸರಬರಾಜು ಆಗದೇ ಇರುವುದರಿಂದ ಸುಮಾರು ರೂ.28.30 ಲಕ್ಷಗಳ ವೆಚ್ಚದಲ್ಲಿ ಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಗಾಗಿ ವೆಚ್ಚ ಮಾಡಿದ ಸಂಪೂರ್ಣ ಹಣ ರೂ. 28.30 ಲಕ್ಷ ವ್ಯರ್ಥವಾಗಿರುತ್ತದೆ ಎಂದು ಹೇಳಬಹುದಾಗಿದೆ.
4) ಕುಡಿಯುವ ನೀರು ಸರಬರಾಜು ಮೂಲವನ್ನು ಸರಿಯಾಗಿ ಗುರುತಿಸದಿರುವುದು, ನೀರಿನ ಸರಿಯಾದ ಮೂಲ ಹೊರತಾಗಿಯೂ ಉಳಿದ ನೀರು ಸರಬರಾಜು ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿರುವುದು ಹಾಗೂ ಸದರಿ ಯೋಜನೆಯು ಅವೈಜ್ಞಾನಿಕವಾಗಿದ್ದು ಕಾಮಗಾರಿಯನ್ನು ರೂಪಿಸುವಲ್ಲಿ ಹಾಗೂ ನಿರ್ವಹಿಸುವಲ್ಲಿ ಮೇಲಿನ 1 ರಿಂದ 7ನೇ ಆಪಾದಿತರು ಮತ್ತು ಮೃತ ಶಾಲಿವಾನ ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾಜ್. ಇಂ.ಉಪ ವಿಭಾಗ, ಔರಾದ್(ಬಿ), ರವರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಾಣುತ್ತದೆ.

ಆದ್ದರಿಂದ ಮೇಲ್ಕಂಡ ಅಧಿಕಾರಿ/ನೌಕರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಂಪೂರ್ಣ ನಿಷ್ಠೆಯನ್ನು ತೋರದೆ ವಿಫಲರಾಗಿ ಕ.ನಾ.ಸೇ. (ನಡತೆ) ನಿಯಮ 1966ರ ನಿಯಮ-3(1) ನ್ನು ಉಲ್ಲಂಘಿಸಿ ಗಂಭೀರವಾದ ಕರ್ತವ್ಯಲೋಪವೆಸಗಿರುವುದರಿಂದ ಅವರುಗಳ ವಿರುದ್ಧ ಈ ಕೆಳಕಂಡಂತೆ ಕ್ರಮ ಜರುಗಿಸಲು ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಶಿಫಾರಸ್ಸು ಮಾಡಿರುತ್ತಾರೆ.

ಎ) ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಮೇಲಿನ ಕ್ರಮ ಸಂಖ್ಯೆ: 2 & 3ರ ಅಧಿಕಾರಿಗಳು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಪ್ರಕರಣವು 2006ರಲ್ಲಿ ಜರುಗಿರುವುದರಿಂದ ಅವರುಗಳ ವಿರುದ್ಧ

ಕ.ನಾ.ಸೇ. ನಿಯಮ 1958ರ ನಿಯಮ-214(2)(ಬಿ)(ii) ರಡಿ ಶಿಸ್ತುಕ್ರಮ ಜರುಗಿಸಲು / ಇಲಾಖಾ ವಿಚಾರಣೆ ನಡೆಸಲು ಅವಕಾಶವಿಲ್ಲದೇ ಇರುವುದರಿಂದ ಅವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ವಸೂಲು ಮಾಡಲು ಸಿವಿಲ್ ದಾವೆ ಹೂಡಲು ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು.

ಬಿ) ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಮೃತ ಶ್ರೀ ಶಾಲಿವಾನ ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾಜ್. ಇಂ.ಉಪ ವಿಭಾಗ, ಔರಾದ್(ಬಿ), ರವರಿಂದ ಸರ್ಕಾರಕ್ಕೆ ಉಂಟಾಗಿರುವ ಹಣವನ್ನು ಅವರ ಕಾನೂನು ಉತ್ತರಾಧಿಕಾರಿಗಳಿಂದ ವಸೂಲು ಮಾಡಲು.

ಸಿ) ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಮೇಲಿನ ಕ್ರಮ ಸಂಖ್ಯೆ: 1 ರಿಂದ 7ರ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸುವಂತೆ

ಡಿ) ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಮೇಲಿನ ಕ್ರಮ ಸಂಖ್ಯೆ: 1, 4 ರಿಂದ 7ರ ಅಧಿಕಾರಿ / ನೌಕರರ ವಿರುದ್ಧ ಕ.ನಾ.ಸೇ. (ವ.ನಿಮೆ) 1957ರ ನಿಯಮ-14(ಎ) ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ತಮಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರು ಬೀದರ್ ಜಿಲ್ಲೆ, ಔರಾದ್ ತಾಲ್ಲೂಕು ಸಂಗಮ ಗ್ರಾಮಕ್ಕೆ ಜಲನಿರ್ಮಲ ಯೋಜನೆಯಡಿ ಕೈಗೊಳ್ಳಲಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದರಿಂದ ಸದರಿ ಯೋಜನೆಗಾಗಿ ಮಾಡಲಾದ ರೂ.28,30,496/-ಗಳ ವೆಚ್ಚವು ನಿರರ್ಥಕವಾಗಿ ಪರಿಣಮಿಸಿರುವುದರಿಂದ ಸಂಬಂಧಪಟ್ಟ ಎಲ್ಲಾ ಅಧಿಕಾರಿ / ನೌಕರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಂಪೂರ್ಣ ನಿಷ್ಠೆ ತೋರದೆ ವಿಫಲರಾಗಿರುವುದು ಸ್ಪಷ್ಟವಾಗಿದ್ದು, ಅವರ ವಿರುದ್ಧ ಈ ಕೆಳಕಂಡಂತೆ ಕ್ರಮವಹಿಸುವುದು ಅವಶ್ಯವೆಂದು ಕಂಡುಬಂದಿರುತ್ತದೆ:-

1) ಪ್ರಕರಣದಲ್ಲಿ ಭಾಗಿಯಾಗಿರುವ ಮೇಲೆ ತಿಳಿಸಿರುವ ಅಧಿಕಾರಿಗಳ ಪೈಕಿ ಸೇವೆಯಿಂದ ನಿವೃತ್ತಿ ಹೊಂದಿರುವ ನೌಕರರುಗಳಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ವಸೂಲು ಮಾಡಲು ಸಿವಿಲ್ ದಾವೆ ಹೂಡಲು;

2) ಪ್ರಕರಣದಲ್ಲಿ ಭಾಗಿಯಾಗಿರುವ ಮೃತ ಶಾಲಿವಾನ ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾಜ್. ಇಂ.ಉಪ ವಿಭಾಗ, ಔರಾದ್(ಬಿ), ರವರಿಂದ ಸರ್ಕಾರಕ್ಕೆ ಉಂಟಾಗಿರುವ ಹಣವನ್ನು ಅವರ ಉತ್ತರಾಧಿಕಾರಿಗಳ ವಿರುದ್ಧ ಸಿವಿಲ್ ದಾವೆ ಹೂಡಿ ವಸೂಲು ಮಾಡುವುದು;

3) ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಸೇವೆಯಲ್ಲಿರುವ ಅಧಿಕಾರಿ / ನೌಕರರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ-1 ರವರಿಗೆ ವಹಿಸುವುದು;

4) ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ಪೈಕಿ ದಿವಂಗತ ಶಾಲಿವಾಹನ, ಹಿಂದಿನ ಕಿರಿಯ ಇಂಜಿನಿಯರ್ ಇವರನ್ನು ಹೊರತುಪಡಿಸಿ ಉಳಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು;

ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 163 ವಿಸೇಬಿ 2015**
**ಬೆಂಗಳೂರು ದಿನಾಂಕ:31-08-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪದ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ

(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ರಂತೆ ನಡೆಸುವ ಸಲುವಾಗಿ, ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ) ರಂತೆ ಮಾನ್ಯ ಉಪ ಲೋಕಾಯುಕ್ತ-1, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರಿಗೆ ವಹಿಸಿ ಆದೇಶಿಸಿದೆ.

1) ಶ್ರೀ ಸೂರ್ಯಕಾಂತ ಶಂಕರಗೊಂಡ, ಹಿಂದಿನ ಉಪ ಯೋಜನಾ ವ್ಯವಸ್ಥಾಪಕರು, ಜಲ ನಿರ್ಮಲ ಯೋಜನೆ, ಜಿಲ್ಲಾ ನೆರವು ಘಟಕ ಬೀದರ್ ಜಿಲ್ಲೆ,
2) ಶ್ರೀ ಅಶೋಕ ಕಾಳಗಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಔರಾದ್(ಬಿ),
3) ಶ್ರೀ ಸೈಯದ್ ಶಕೀರ ರಾಜ, ಹಿಂದಿನ ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಔರಾದ್ (ಬಿ)
4) ಶ್ರೀ ಮಲ್ಲಿಕಾರ್ಜುನ ಕಾರಂಜಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಔರಾದ್ (ಬಿ),
5) ಶ್ರೀ ರವೀಂದ್ರ ಯರನಲ್ಲೆ, ಹಿಂದಿನ ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಔರಾದ್ (ಬಿ).

ಶ್ರೀ ಎನ್.ಎ.ಪಾಟೀಲ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಹಾಗೂ ಶ್ರೀ ಮಲ್ಲಿಕಾರ್ಜುನ ಮರೂರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, (ನಿವೃತ್ತ) ಇವರುಗಳಿಂದ ಪ್ರಸ್ತುತ ಪ್ರಕರಣದಲ್ಲಿ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಲೆಕ್ಕಾಚಾರ ಮಾಡಿ ಸಿವಿಲ್ ದಾವೆ ಹೂಡುವ ಮೂಲಕ ವಸೂಲು ಮಾಡಲು ಮತ್ತು ದಿವಂಗತ ಶಾಲಿವಾಹನ, ಹಿಂದಿನ ಕಿರಿಯ ಇಂಜಿನಿಯರ್, ಇವರಿಂದ ಪ್ರಸ್ತುತ ಪ್ರಕರಣದಲ್ಲಿ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಲೆಕ್ಕಾಚಾರ ಮಾಡಿ ಸದರಿ ಮೊತ್ತವನ್ನು ಅವರ ವಾರಸುದಾರರ ವಿರುದ್ಧ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡುವ ಮೂಲಕ ವಸೂಲು ಮಾಡಲು ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ &ಸಿ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ: 1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಉಪ ನಿಬಂಧಕರು(ಪ್ರ), ವಿಚಾರಣೆಗಳು-3 ಮಾನ್ಯ ಕರ್ನಾಟಕ ಲೋಕಾಯುಕ್ತ ರವರ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್
5. ಸಂಬಂಧಪಟ್ಟ ಅಧಿಕಾರಿಗಳು-ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್ ಇವರ ಮುಖಾಂತರ.

**ಪ್ರತಿಗಳು ಮಾಹಿತಿಗಾಗಿ :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) / ಉಪಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.